ರಾಮಪುರ ಏತ ನೀರಾವರಿ ಯೋಜನೆ ಕುರಿತು.

2004 - ಶ್ರೀ ಅಮರೇಗೌಡ ಪಾಟೀಲ (ಲಿಂಗಸುರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಮಪುರ ಏತ ನೀರಾವರಿ ಯೋಜನೆ ಕಾಮಗಾರಿ ಕೆಲಸ ಯಾವ ವರ್ಷದಿಂದ ಪ್ರಾರಂಭಗೊಂಡಿದೆ.

ಆ) ಈ ಯೋಜನೆಗಾಗಿ ಇಲ್ಲಿಯವರೆಗೂ ಎಷ್ಟು ಹಣ ಮಂಜೂರು ಮಾಡಲಾಗಿದೆ.

ಇ) ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ. ಇದರ ಅಂದಾಜು ವೆಚ್ಚ ಎಷ್ಟು.

ಈ) ಈ ಯೋಜನೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡುವುದರಿಂದ ಹೆಚ್ಚಿನ ಕ್ಷೇತ್ರಕ್ಕೆ ನೀರೊದಗಿಸಲು ಸಾಧ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಇಲ್ಲದಿದ್ದಲ್ಲಿ ಈಗಲಾದರೂ ಬದಲಾವಣೆಗಾಗಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ರಾಮಪುರ ಏತ ನೀರಾವರಿ ಯೋಜನೆ ಕಾಮಗಾರಿಯ ಮುಖ್ಯ ಸ್ಥಾವರದ ಕೆಲಸವನ್ನು 95-96ನೇ ವರ್ಷದಿಂದ ಕೈಗೊಳ್ಳಲಾಗಿದೆ.

ಆ) ಈ ಯೋಜನೆಗಾಗಿ ಇಲ್ಲಿಯವರೆಗೆ ರೂ. 93.38 ಲಕ್ಷ ಹಣ ಮಂಜೂರು ಮಾಡಲಾಗಿದೆ.

ಇ) ಈ ವರ್ಷದ ಆಯವ್ಯಯದಲ್ಲಿ ರೂ. 25 ಲಕ್ಷ ಹಣ ಒದಗಿಸಲಾಗಿದೆ. ಈ ಯೋಜನೆಯ ಒಟ್ಟು ಅಂದಾಜು ರೂ. 114.00 (1986-87) ಕೋಟಿ ಇರುತ್ತದೆ. ಆದರೆ, ಈಗ ಕೈಗೊಂಡಿರುವ ನೀರೆತ್ತುವ ಮುಖ್ಯ ಸ್ಥಾವರಗಳ ಕಾಮಗಾರಿಯ ಅಂದಾಜು ರೂ. 4.30 ಕೋಟಿ ರೂ. ಇರುತ್ತದೆ.

ಈ) ಕೃಷ್ಣ ಮೇಲ್ದಂಡೆ ಯೋಜನೆ ಕೆಳಗಿನ ಪ್ರತಿ ಉಪ ಯೋಜನೆಗೆ ನಿರ್ದಿಷ್ಟವಾದ ನೀರಿನ ಹಂಚಿಕೆ ಆಗಿರುತ್ತದೆ. ಆದುದರಿಂದ ಈ ಯೋಜನೆಗೆ ಹೆಚ್ಚಿನ ನೀರು ಇಲ್ಲದೇ ಅಧಿಕ ಕ್ಷೇತ್ರಕ್ಕೆ ನೀರು ಒದಗಿಸುವುದು ಸಾಧ್ಯವಾಗುವುದಿಲ್ಲ.

ಕೆ.ಎ.ಎಸ್, ಕೆ.ಪಿ.ಎಸ್. ಮತ್ತು ಕೆ.ಎಫ್. ಎಸ್, ರವರಿಗೆ ಬಡ್ತಿಯ ಬಗ್ಗೆ

2376 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಕೆಎಎಸ್, ಕೆಪಿಎಸ್, ಕೆಎಫ್ಎಸ್‌ನವರಿಗೆ ಶೇಕಡಾವಾರು ಬಡ್ತಿ ನೀಡಿಕೆಯಲ್ಲಿ ಎಷ್ಟು ಪ್ರಮಾಣದಲ್ಲಿ (ಶೇಕಡ) ನೀಡಲಾಗುತ್ತಿದೆ?

ಆ) ಕಳೆದ ಮೂರು ವರ್ಷದಲ್ಲಿ ರಾಜ್ಯದ ಶೇಕಡವಾರು ನಿಯಮದನ್ವಯ ಎಷ್ಟು ಜನರಿಗೆ ಬಡ್ತಿ ನೀಡಲಾಗಿದೆ(ವಿವರವಾದ ಪಟ್ಟಿಯನ್ನು ನೀಡಲಾಗುವುದೇ)

ಇ) ಅಡಳಿತ ಭಾಷೆಯಾಗಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಯಾಗುವ ದಿಸೆಯಲ್ಲಿ ಕನ್ನಡಿಗ ಅಧಿಕಾರಿಗಳು ಉನ್ನತ ಸ್ಥಾನದಲ್ಲಿರುವುದು ಸಮಂಜಸವಲ್ಲವೆ?

ಈ) ಹಾಗಿದ್ದಲ್ಲಿ, ಈಗಿರುವ ಭಾರತೀಯ ಸೇವೆ ಮತ್ತು ಕರ್ನಾಟಕ ಆಡಳಿತ ಸೇವೆಯಲ್ಲಿ ಬಡ್ತಿ ಪ್ರಮಾಣವನ್ನು ಶೇಕಡವಾರು ಹೆಚ್ಚಿಸಲು ಸರ್ಕಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು)

ಅ) ಕೆ.ಎ.ಎಸ್ (ಕೆಎಎಸ್ ಅಲ್ಲದೆ ರಾಜ್ಯ ಸೇವಾ ಅಧಿಕಾರಿಗಳನ್ನು ಒಳಗೊಂಡು) — ಭಾ.ಆ.ಸೇ (ನೇಮಕಾತಿ) ನಿಯಮಗಳು 1954ರ ಅನುಸಾರ ಐಎಎಸ್ ಹಿರಿಯ ಕೇಡರ್ ಹುದ್ದೆಗಳು ಮತ್ತು ಕೇಂದ್ರ ನಿಯೋಜನೆ ಮೀಸಲು ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡ $33\frac{1}{3}$ ರಷ್ಟು.

ಕೆ.ಪಿ.ಎಸ್. (ಕರ್ನಾಟಕ ಪೋಲೀಸ್ ಸೇವೆ) — ಭಾ.ಪೋ.ಸೆ. (ನೇಮಕಾತಿ) ನಿಯಮಗಳು 1954ರ ಅನುಸಾರ ಐಪಿಎಸ್ ಹಿರಿಯ ಕೇಡರ್ ಹುದ್ದೆಗಳು ಮತ್ತು ಕೇಂದ್ರ ನಿಯೋಜನೆ ಮೀಸಲು ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡ $33\frac{1}{3}$ ರಷ್ಟು

ಕೆ.ಎಫ್.ಎಸ್. (ಕರ್ನಾಟಕ ಅರಣ್ಯ ಸೇವೆ) — ಭಾ.ಆ.ಸೇ (ನೇಮಕಾತಿ) ನಿಯಮಗಳು 1966ರ ಅನುಸಾರ ಐಎಫ್.ಎಸ್ ಹಿರಿಯ ಕೇಡರ್ ಹುದ್ದೆಗಳು ಮತ್ತು ಕೇಂದ್ರ ನಿಯೋಜನೆ ಮೀಸಲು ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡ $33\frac{1}{3}$ ರಷ್ಟು

ಆ) ಐ.ಎ.ಎಸ್ 15

ಐ.ಪಿ.ಎಸ್ 6

ಐ.ಎಫ್.ಎಸ್ 3

(ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಹೌದು

ಈ) ಮೇಲೆ ತಿಳಿಸಿದ ನಿಯಮಗಳಡಿಯಲ್ಲಿ ಭಾರತ ಸರ್ಕಾರ ನಿಗದಿಗೊಳಿಸಿರುವ ಬಡ್ತಿ ಕೋಟಾವು ಎಲ್ಲಾ ರಾಜ್ಯಗಳಿಗೆ ಅನ್ವಯಿಸುತ್ತದೆ.

ಅನುಬಂಧ

1992ರಿಂದ 1995 ಅವಧಿಯಲ್ಲಿ ಅಖಿಲ ಭಾರತ ಸೇವೆಗೆ ಬಡ್ತಿ ಹೊಂದಿದ ಕೆ.ಎ.ಎಸ್, ಕೆ.ಪಿ.ಎಸ್ ಮತ್ತು ಕೆ.ಎಫ್.ಎಸ್. ಅಧಿಕಾರಿಗಳ ಪಟ್ಟಿ.

ಸ್ಥಾನ	ವರ್ಷ		
	1992	1993	1994-95
	ಶ್ರೀ/ಶ್ರೀಮತಿ	ಶ್ರೀ/ಶ್ರೀಮತಿ	ಶ್ರೀ/ಶ್ರೀಮತಿ
ಐ.ಎ.ಎಸ್	1. ಟಿ. ಮುಕ್ತಾಂಬ	1. ಡಿ.ಎಸ್. ಅಶ್ವತ್	1. ಸೈಯದ್ ಜಮೀರ್ ಪಾಷಾ
	2. ಸಿ.ಹೆಚ್. ಗೋವಿಂದಭಟ್	2. ಹೆಚ್. ಶಶಿಧರ	2. ಬಿ.ಕೆ. ಪರೀಶ್‌ಗೌಡ
	3. ಜನ್ನು ಅರವಿಂದ ರಾಮಚಂದ್ರ	3. ಪಿ.ಎನ್. ಶ್ರೀನಿವಾಸಾಚಾರಿ	3. ಬಿ.ಆರ್. ಜಯರಾಮರಾಜ ಅರಸ್
			4. ಪಿ. ಗಣೇಶನ್

	4. ರಮೇಶ ಬಿಂದುರಾವ್ ಝಳಕಿ		5. ಡಿ.ಎಸ್. ನಾಯಕ್ 6. ಎಸ್.ಜಿ. ಹೆಗಡೆ 7. ಆಜೀಜುಲ್ಲಾ ಬೇಗ್ 8. ಜಿ.ವಿ. ಕೊಂಗವಾಡ
ಐ.ಪಿ.ಎಸ್.	1. ಎಸ್.ಕೆ. ವೇಣುಗೋಪಾಲ್ 2. ಎನ್.ಆರ್. ನಡಮನಿ	1. ಯು. ನಿಸ್ಸಾರ್‌ಅಹ್ಮದ್ 2. ಎ.ಜಿ. ಅಯಾಚೀತ್	1. ಜಯಪ್ರಕಾಶ್ ವಿ. ನಾಯಕ್ 2. ಗೋಪಾಲ್ ಬಿ. ಹೊಸೂರ್
ಐ.ಎಫ್.ಎಸ್.	-	1. ಬಿ.ಜಿ. ಮುಗ್ದುರ್ 2. ಎ.ಸಿ. ಕೇಶವಮೂರ್ತಿ.	1. ಜಾವೇದ್ ಹುಸೇನ್ ಖಾನ್

ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ನೇಮಕಾತಿ

1943 - ಶ್ರೀ ಇಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿಮಾಡುವ ಸಲುವಾಗಿ ಯಾವ ವರ್ಷದಲ್ಲಿ ಜಾಹೀರಾತು ನೀಡಲಾಗಿತ್ತು ನೇಮಕಾತಿ ಮಾಡಿಕೊಳ್ಳಲಾಗಿದೆಯೇ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೂ ಸೇರಿ (ಜಾಹೀರಾತಿನ ಪ್ರತಿಯನ್ನು ಒದಗಿಸುವುದು)

ಆ) ಈ ಜಾಹೀರಾತಿನಲ್ಲಿ ನಮೂದಿಸಲಾಗಿರುವ ಹುದ್ದೆಗಳಷ್ಟು ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳಿವೆ.

ಇ) ಕನ್ನಡ ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು ಸಾವಿರಾರು ಸಂಖ್ಯೆಯಲ್ಲಿ ವಯೋಮಿತಿ ಮೀರಿ ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳ ಭರ್ತಿಗಾಗಿ ಸರ್ಕಾರದವರು ಕೂಡಲೇ ಜಾಹೀರಾತು ನೀಡಿ, ವಯೋಮಿತಿಯಲ್ಲಿ ಎಲ್ಲಾ ವರ್ಗಗಳಿಗೂ 10 ವರ್ಷಗಳ ಸಡಿಲಿಕೆಯೊಂದಿಗೆ ನೇಮಕ ಮಾಡುವ ಯೋಜನೆ ಸರ್ಕಾರಕ್ಕಿದೆಯೇ ಇದ್ದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು.

ಉ) ನೇಮಕ ಮಾಡಿಕೊಳ್ಳುವಾಗ ವಯೋಮಿತಿ ಮೀರುತ್ತಿರುವವರಿಗೆ ಮೊದಲು ಅವ್ಯತೆ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ಈ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಯಾವುದಾದರೂ ಸಂಘ ಸಂಸ್ಥೆಗಳಿಂದ ಸರ್ಕಾರಕ್ಕೆ ಮನವಿಗಳು ಬಂದಿದೆಯೇ.

ಊ) ಈ ಹುದ್ದೆಗಳ ಖಾಲಿ ಸ್ಥಾನಗಳಿಷ್ಟು ಈಗಿರುವ ಬೆರಳಚ್ಚು ನಿರುದ್ಯೋಗಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) (1) 19985

(2) 1989

(3) 1989 ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ವಿಶೇಷ ಬ್ಯಾಕ್‌ಲಾಗ್ ಆಯ್ಕೆ.

(4) 1994 ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ವಿಶೇಷ ಬ್ಯಾಕ್‌ಲಾಗ್ ಆಯ್ಕೆ.

1,2 ಮತ್ತು 3ರಲ್ಲಿ ಮಾಡಿದ ಆಯ್ಕೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ. 4ರಲ್ಲಿ ಆಯ್ಕೆ ಪಟ್ಟಿಯನ್ನು ದಿ: 31-7-95ರಂದು ಪ್ರಕಟಿಸಲಾಗಿದೆ.